೩. ರೂ. ೪,೦೬,೦೨,೭೩೫–೦೦ (ಈ ಮೊತ್ತಕ್ಕೆ ಹಿಂದಿನ ವರ್ಷಗಳ ಅಪಘಾತಗಳಲ್ಲಿ ನೊಂದ ವರಿಗೆ ಪ್ರಸಕ್ತ ವರ್ಷದಲ್ಲಿ ತೀರ್ಮಾನವಾದ ಪರಿಹಾರದ ಮೊತ್ತವೂ ಸೇರಿದೆ).—

೪. ವಿಭಾಗ	ಅಪಘಾತಗಳ ಸಂಖ್ಯೆ
ಬಿ.ಟಿ.ಎಸ್.	೫೬೭
ಬೆಂಗಳೂರು	೨೭೯
ಮೈಸೂರು	೧೫೫
ಹುಬ್ಬಳ್ಳಿ	೧೫೨
ಬೆಳಗಾಂ	೧೩೫
ಪಾಸನ	೧೨೩

ಕಿರಿದಾದ ರಸ್ತೆಗಳು, ಹೆಚ್ಚುತ್ತಿರುವ ವಾಹನ ಸಂಖ್ಯೆಗಳು, ಸಂಚಾರಿ ನಿಯಮಗಳನ್ನು ಪಾಲಿಸದಿರುವುದು, ಚಾಲಕರ ನಿರ್ಲಕ್ಷತನಗಳು.

೫. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅಪಘಾತಗಳನ್ನು ವಿವರವಾಗಿ ವಿಮರ್ಶಿಸಿ ಅವುಗಳನ್ನು ತಡೆಯಲು ಪ್ರಯತ್ನ ಮಾಡುತ್ತಿದೆ.

೧. ಚಿನ್ನ ಹಾಗೂ ಬೆಳ್ಳಿಯ ಪದಕಗಳನ್ನು ಅಪಘಾತ ರಹಿತ ಸೇವೆ ಸಲ್ಲಿಸಿದ ಚಾಲಕರಿಗೆ ನೀಡುವುದರಿಂದ.

೨. ಕರಪತ್ರಗಳ ಮುಖಾಂತರ ಹಾಗೂ ಸಂಸ್ಥೆಯ ಹಿರಿಯ ಅಧಿಕಾರಿಗಳು ಆಗಿಂದಾಗೆ ತಿಳುವಳಿಕೆ ನೀಡುವುದರಿಂದ.

೩. ಸೇವೆಯಲ್ಲಿರುವ ಹಾಗೂ ಹೊಸದಾಗಿ ಸೇರುವ ಚಾಲಕರುಗಳಿಗೆ ತರಬೇತಿ ನೀಡುವುದರಿಂದ.

೪. ತಪ್ಪಿಸ್ಥ ಚಾಲಕರುಗಳ ಮೇಲೆ ಕ್ರಮ ಜರುಗಿಸುವುದರಿಂದ

೫. ಆಗಿಂದಾಗೆ ಅಪಘಾತಗಳನ್ನು ಪುನರವಲೋಕಿಸಿ ತಿಳುವಳಿಕೆ ನೀಡುವುದರಿಂದ.

ವಿವಿಧ ಇಲಾಖೆಗಳಲ್ಲಿರುವ ಖಾಲಿ ಇರುವ ಸರಕಾರಿ ಹುದ್ದೆಗಳು

೧೯೪೪ ಶ್ರೀ ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೨ರ ಇಸವಿಯ ಅಂತ್ಯದವರೆವಿಗೆ ರಾಜ್ಯದ ವಿವಿಧ ಇಲಾಖೆಗಳಲ್ಲಿದ್ದ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ? ಎಷ್ಟು ಹುದ್ದೆಗಳನ್ನು ತುಂಬಲಾಗಿದೆ, ಖಾಲಿ ಇರುವ ಹುದ್ದೆಗಳೆಷ್ಟು ಯಾವಾಗ ಹುದ್ದೆಗಳನ್ನು ತುಂಬಲಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ೧೯೮೨ರಲ್ಲಿ ಖಾಲಿಯಿದ್ದ ಹುದ್ದೆಗಳ ಸಂಖ್ಯೆ ೪೨,೦೦೦. ೧೯೮೨ ರಿಂದ ೧೯೮೭–೮೮ರವರೆಗೆ ಭರ್ತಿ ಮಾಡಿರುವ ಹುದ್ದೆಗಳ ಸಂಖ್ಯೆ ೬೯,೫೨೦. ಈಗ ಖಾಲಿ ಇರುವ ಹುದ್ದೆಗಳು ೪೬,೮೧೩. ಹುದ್ದೆಗಳು ಖಾಲಿಯಾಗುವುದು ಮತ್ತು ಅವುಗಳನ್ನು ಭರ್ತಿ ಮಾಡುವುದು ಒಂದು ನಿರಂತರವಾದ ಕ್ರಿಯೆ. ಹುದ್ದೆಗಳನ್ನು ತುಂಬುವುದಕ್ಕೆ ಕಾಲಮಿತಿಯನ್ನು, ಸೂಚಿಸಲಾಗದು.